ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ.ಎಫ್.ಸಿ. ಹರಿಹರ

ಸ್ಸಿ.ಸ್ಸಿ. 27/2016

ಪಿ ಡಬ್ಲ್ಯೂ-11
ಸಿ.ಡಬ್ಲ್ಯೂ15

ಸಾಕ್ಷಿಯ ಹೆಸರುಃ ಹೆಚ್ ಎಂ ಬಸಪ್ಪ

ತಂದೆಯ ಹೆಸರುಃ ಮಹಾದೇವಪ್ಪ

ವಯಸ್ಸುಃ 65 ವರ್ಷ

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಲಕ್ಕೆಟ್ಟಿಹಳ್ಳಿ

ಸಾಕ್ಷಿಯನ್ನು ದಿನಾಂಕ 30.01.2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಬಿಯೋಜಕರಿಂದ

ಆರೋಪಿ ಪರಿಚಯ ಇರುತ್ತಾನೆ. ಲಕ್ಕೆಟ್ಟಿ ಹಳ್ಳಿಯಲ್ಲಿರುವ ನನ್ನ ಜವಿೀನಿನಲ್ಲಿ ಭತ್ತ ಬೆಳೆದಿದ್ದೆ. ಸದರಿ ಭತ್ತವನ್ನು ಆರೋಪಿಗೆ ಮಾರಾಟ ಮಾಡಿದ್ದೆ. 2010 ರಲ್ಲಿ ಆರೋಪಿ ನಮ್ಮ ಊರಿಗೆ ಬಂದು ನಮ್ಮ ಭತ್ತವನ್ನು 1120 ರೂ ನಂತೆ 431 ಚೀಲ ಸುಮಾರು 75 ಕೆ ಜಿ ತೂಕದ ಚೀಲಗಳನ್ನು ಟ್ರಾಕ್ಟರ್ ಮತ್ತು ಲಾರಿಯಲ್ಲಿ ಲೋಡ್ ಮಾಡಿಕೊಂಡುಹೋಗಿ ನಂದಿತಾವರೆ ರೈಸ್ ಮಿಲ್ಗೆ ತೆಗೆದುಕೊಂಡು ಹೋಗಿರುತ್ತಾನೆ. ಸದರಿ ಹಣ ಒಂದು ತಿಂಗಳಲ್ಲಿ ಕೊಡಬೇಕು ಎಂದು ಮಾತುಕತೆಯಾಗಿದ್ದು ನನಗೆ ಒಟ್ಟು 3 ಲಕ್ಷ 84 ಸಾವಿರ ಚಿಲ್ಲರ ಹಣ ಕೊಡಬೇಕಾಗಿತ್ತು. 15 ದಿನಂ ಆದ ನಂತರ ನಾನು ಮಿಲ್ ಗೆ ಹೋದಾಗ ಬಸವರಾಜಪ್ಪ ಅನೇಕರಿಗೆ ಮೋಸ ಮಾಡಿ ಊರು ಬಿಟ್ಟು ಹೋಗಿರುತ್ತಾನೆ ಎಂದು ನನಗೆ ತಿಳಿದು ಬಂತು. ಆರೋಪಿ ನನಗೆ ಮತ್ತು ಅನೇಕ ರೈತರಿಗೆ ಮೋಸ ಮಾಡಿರುತ್ತಾನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾನೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್ ಪಿ. **ವಕೀಲರಿಂದ**

ನಾನು ಪಿ ಯು ಸಿ. ವರೆಗೆ ಓದಿರುತ್ತೇನೆ. ನನಗೆ ವ್ಯವಹಾರಿಕ ಜ್ಞಾನ ಇರುತ್ತದೆ ಎನ್ನುವುದು ನಿಜ. ನಾವು ಬೆಳೆದಂತಹ ಬೆಳೆಯನ್ನು ಎಪಿಎಂಸಿ ಯ ಮೂಲಕ ಮಾರಾಟ ಮಾಡಬೇಕು ಎನ್ನುವುದು ಪದ್ಧತಿ ಎನ್ನುವುದು ನಿಜ. ಕೃಷಿ ಉತ್ಪನ್ನ ಮಾರುಕಟ್ಟೆಯ ಮೂಲಕ ಭತ್ತವನ್ನು ಮಾರಾಟ ಮಾಡುವಾಗ ಯಾರಿಗೆ ಲೈಸೆನ್ಸ್ ಇರುತ್ತದೆಯೋ ಅಂತಹವರಿಗೆ ಮಾರಾಟ ಮಾಡಬೇಕು ಎನ್ನುವುದು ನಿಜ. ಎಪಿಎಂಸಿ ಯಿಂದ ಲೈಸೆನ್ಸ್ನು ಪಡೆಯದೇ ರುವವರು ಖರೀದಿ ಮಾಡಿದರೆ ಅಂತಹವರ ವಿರುದ್ಧ ಎಪಿಎಂಸಿ ಯವರು ಕಾನೂನು ಕ್ರಮಕೈಗೊಳ್ಳುತ್ತಾರೆ ಎನ್ನುವುದು ನಿಜ. . ಅಂತಹ ಸಮಯದಲ್ಲಿ ಲೈಸೆನ್ಸ್ ಇಲ್ಲದೇ ಇರುವವರು ನಮ್ಮ ಊರಲ್ಲಿ ಬಂದು ಖರೀದಿ ಮಾಡುತ್ತಿದ್ದಾರೆ ಎಂದು ನಾವೂ ಸಹ ಎಪಿಎಂಸಿ ಗೆ ದೂರು ಕೊಡಬಹುದು ಎಂದರೆ ನಿಜ. ಟ್ರಾಕ್ಟರ್ ನಲ್ಲಿ ಮತ್ತು ಲಾರಿಯಲ್ಲಿ ನಮ್ಮ ಭತ್ತವನ್ನು ತೆಗೆದುಕೊಂಡು

ಸಿ.ಸಿ. 27/2016

ಪಿ ಡಬ್ಲ್ಯೂ11
ಸಿ.ಡಬ್ಲ್ಯೂ15

ಹೋಗಿ ನಂದಿತಾವರೆಯ ನಾಗೇಶ್ವರಾವ್ ಇವರ ರೈಸ್ ಮಿಲ್ ನಲ್ಲಿ ಇಳಿಸಿರುತ್ತಾರೆ. ನಾಗೇಶ್ವರ್ ರಾವ್ ಇವರು ಎಪಿಎಂಸಿ ಯಿಂದ ಅಧಿಕೃತವಾಗಿ ಪರವಾನಿಗಿ ಪಡೆದು ವ್ಯವಹಾರ ಮಾಡುತ್ತಾರೆ ಎಂದರೆ ನಿಜ. ಆರೋಪಿಯೇ ನಮ್ಮ ಭತ್ತವನ್ನು ಖರೀದಿ ಮಾಡಿರುತ್ತಾನೆ ಎನ್ನುವುದಕ್ಕೆ ದಾಖಲೆಯನ್ನು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ. 1 ತಿಂಗಳು ಬಿಟ್ಟು ಹಣ ಕೊಡುತ್ತೇನೆ ಎನ್ನುವ ಕುರಿತು ನನ್ನ ಮತ್ತು ಆರೋಪಿಯ ಮದ್ಯೆ ಬರವಣಿಯಲ್ಲಿ ಆಗಿಲ್ಲ. 15 ದಿನ ಆದ ನಂತರ ಆರೋಪಿ ಊರಲ್ಲಿ ಇಲ್ಲ ಊರು ಬಿಟ್ಟು ಹೋಗಿರುತ್ತಾನೆ ಎನ್ನುವ ವಿಷಯ ಭತ್ತ ಕೊಟ್ಟಂತಹ ಅನೇಕ ರೈತರಿಂದ ಗೊತ್ತಾಗಿರುತ್ತದೆ ಆದರೆ ಅವರ ಹೆಸರು ಗೊತ್ತಿಲ್ಲ. ನಮ್ಮ ಗ್ರಾಮದ ಎನ್ ನಾಗಪ್ಪ ಇವರ ಬಾಬ್ತು 119 ಚೀಲ ಭತ್ತವನ್ನು 1 ಕ್ವಿಂಟಾಲ್ ಬತ್ತಕ್ಕೆ 1120 ರೂ ನಂತೆ ಮಾತನಾಡಿ ಖರೀದಿಸಿದ್ದು ಇದರ ಬಾಬ್ತು 1,05,325 ರೂ ಆಗಿದ್ದು ಇದರಲ್ಲಿ 10 ಸಾವಿರ ಹಣವನ್ನು ಕೊಟ್ಟಿದ್ದು ವಸಂತಪ್ಪ ತಂದೆ ನಾಗಪ್ಪ ಇವರ ಬಾಬ್ತು 35 ಚಿಲ ಭತ್ತವನ್ನು 1 ಕ್ವಿಂಟಾಲ್ ಭತ್ತಕ್ಕೆ1120 ರೂನಂತೆ ಮಾತನಾಡಿ ಖರೀದಿಸಿದ್ದು ಇದರ ಬಾಬ್ತು 30,800 ರೂ ಆಗಿದ್ದು ಎಂದು ಪೋಲೀಸರಿಗೆ ನಾನು ಹೇಳಿಕೆಯಲ್ಲಿ ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ 2 ಎಂದು ಗುರುತಿಸಲಾಯಿತು. ಆರೋಪಿ ಊರನ್ನು ಬಿಟ್ಟು ಹೋಗಿರುತ್ತಾನೆ ಎಂದು ಗೊತ್ತಾದ ತಕ್ಷಣ ನಾನು ಪಿರ್ಯಾದಿಯನ್ನು ಕೊಟ್ಟಿದ್ದೇನೆ. ಸದರಿ ದಾಖಲೆಯನ್ನು ತನಿಖಾಧಿಕಾರಿಗೆ ಹಾಜರು ಪಡಿಸಿದ್ದೇನೆ. ನಾನು ಯಾವುದೇ ಸಮಯದಲ್ಲಿ ಆರೋಪಿಗೆ ಮಾರಾಟ ಮಾಡಿಲ್ಲ ಶ್ರೀನಿವಾಸ ರೈಸ್ ಮಿಲ್ಗೆ ಮಾರಾಟ ಮಾಡಿ ಆರೋಪಿ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಹಣ ಕೊಡುವುದು ಬಾಕಿ ಉಳಿದಿಲ್ಲ ಮತ್ತು ಕೊಡಲು ಬಾದ್ಯಸ್ಥ ಅಲ್ಲ ಯಾವುದೇ ಭತ್ತ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ ಹಾಗೂ ಆರೋಪಿ ನಮಗೆ ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ನಾಗೇಶ್ವರ್ ರಾವ್, ನಾನು ಹಾಗೂ ಉಳಿದ ರೈತರು ಸೇರಿಕೊಂಡು ಆರೋಪಿ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹರಿಹರ